ಶ್ರೀ ಆರ್.ಎಲ್. ಜಾಲಪ್ಪ.—ನಾನು ಈಗಾಗಲೇ ಹೇಳಿದ್ದೇನೆ. ಟೆಂಡರ್ ಕರೆದ ಮೇಲೆ ನೆಗೋಷಿಯೇಷನ್ ಆಗುವಾಗ ಇಪ್ಪರದ್ದೇ ರೇಟು ಕಡಿಮೆ ಇತ್ತು. ಎರಡನೇ ಸಾರಿ ನೆಗೋಷಿಯೇಷನ್‌ಗೆ ಕರೆದಾಗಲೂ ಹತ್ತು ಲಕ್ಷ ರೂಪಾಯಿ ಕಡಿಮೆ ಇತ್ತು. ಇಪ್ಪರು ಕೊಟ್ಟ ಟೆಂಡರ್‌ನಲ್ಲಿ ಹತ್ತು ಲಕ್ಷ ರೂಪಾಯಿ ಕಡಿಮೆ ಮಾಡಿಸಿ ಕೊಟ್ಟಿದ್ದೇವೆ. ನಾನು ಮತ್ತು ಕಾರ್ಯದರ್ಶಿಯವರು ಸಭೆ ಮಾಡಿದ್ದೇವೆ. ಈಗ ಮೆಷಿನರಿ ಬಂದಿದೆ, ಕೆಲಸ ಆಗುತ್ತಿದೆ. ಒಟ್ಟಿಗೆ ೪–೫ ಲಕ್ಷ ರೂಪಾಯಿ ಬಿಲ್ ಕೊಡಿ ಎಂದರೆ ಕೊಡುತ್ತಿಲ್ಲ, ಒಂದೊಂದು ಸಾರಿ ಸ್ವಲ್ಪ ಸ್ವಲ್ಪ ಕೊಟ್ಟರೆ ಹೇಗೆ ಮಾಡುವುದು ಎಂದು ಹೇಳುತ್ತಾರೆ. ಒಟ್ಟಿನಲ್ಲಿ ೧೯೮೭ರೊಳಗೆ ಆಥವಾ ೧೯೮೮ರ ಪುಧ್ಯಕ್ಕಾದರೂ ಕ್ರಷಿಂಗ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆಂಬ ಭರವಸೆ ಕೊಡುತ್ತೇನೆ.

ಸಾರ್ವಜನಿಕರ ಉಪಯೋಗಕ್ಕಾಗಿ ಹಿಡುವಳಿ ಭೂಮಿ ಸ್ವಾಧೀನಪಡಿಸಿಕೊಳ್ಳುವ ಬಗ್ಗೆ

೭ (೨೧೭) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸಾರ್ವಜನಿಕರ ಉಪಯೋಗಕ್ಕಾಗಿ ಹಿಡುವಳಿ ಭೂಮಿ ಸ್ವಾಧೀನ ಪಡಿಸಿಕೊಳ್ಳುವಾಗ ಸರಕಾರವ ರಾಜ್ಯಪತ್ರದ ಬದಲಾಗಿ ವೃತ್ತಪತ್ರಿಕೆಯಲ್ಲಿ ಪ್ರಕಟಿಸಬೇಕೆಂಬ ಕಾನೂನಿನಿಂದಾಗಿ, ಸ್ವಾಧೀನ ಪಡಿಸಿಕೊಳ್ಳುವ ಭೂಮಿಯ ಬೆಲೆಗಿಂತ, ವೃತ್ತಪತ್ರಿಕೆಗಳ ಪ್ರಕಟಣೆಗೆ ಹೆಚ್ಚು ಹಣ ತರಬೇಕಾಗಿ ಸ್ವಾಧೀನಪಡಿಸಿಕೊಳ್ಳುವಲ್ಲಿ ವಿಳಂಬ ಮತ್ತು ತೊಂದರೆ ಆಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಇದನ್ನು ಸರಿಗೊಳಿಸುವ ಬಗ್ಗೆ ಸರಕಾರದವರು ಆಲೋಚಿಸಿದ್ದಾರೆಯೇ ?

ಶ್ರೀ ಎಸ್.ಆರ್. ಬೊಮ್ಮಾಯಿ (ಯೋಜನಾ ಹಾಗೂ ಕಾರ್ಮಿಕ ಕಂದಾಯ ಮಂತ್ರಿಗಳು).—

ಅ) ಹೌದು, ಕೆಲವೊಂದು ಪ್ರಕರಣಗಳಲ್ಲಿ ಮಾತ್ರ.

ಆ) ಭೂಸ್ವಾಧೀನ ಕಾಯಿದೆಯು ಕೇಂದ್ರ ಕಾಯ್ದೆಯಾಗಿದೆ ಅಧಿಸೂಚನೆಯ ಮುಖ್ಯಾಂಶವನ್ನು ಮಾತ್ರ ವೃತ್ತಪತ್ರಿಕೆಯಲ್ಲಿ ಪ್ರಕಟಿಸಿ ಕಾಯಿದೆಗೆ ತಿದ್ದುಪಡಿ ತರುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

ಶ್ರೀ ಬಿ. ಲಕ್ಕಪ್ಪ.—ಸೆಂಟ್ರಲ್ ಆಕ್ಟ್‌ನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಅದಕ್ಕೆ ರೂಲ್ಸ್ ಮಾಡತಕ್ಕವರು ರಾಜ್ಯಸರ್ಕಾರದವರೆ. ರಾಜ್ಯ ಸರ್ಕಾರಕ್ಕೆ ಆ ಒಂದು ಹಕ್ಕು ಇದೆ. ರೂಲ್ಸ್ ಮಾಡತಕ್ಕ ಕಾಲದಲ್ಲಿ ಇದಕ್ಕೆ ಬದಲಾವಣೆ ಮಾಡದೇ ಹೋದರೆ ತೊಂದರೆಯಾಗುತ್ತದೆ. ಏಕೆಂದರೆ ಅದು ಗ್ರಾಮ ಬಡಾವಣೆ ಆಲ್ಲ. ಸಾರ್ವಜನಿಕ ರಸ್ತೆ ನಿರ್ಮಾಣಕ್ಕೆ, ಆಸ್ಪತ್ರೆ ಮೊದಲಾದ ಸಾರ್ವಜನಿಕ ಉದ್ದೇಶಕ್ಕಾಗಿ ಹಿಡುವಳಿ ಭೂಮಿಯನ್ನು ಆಕ್ವೈರ್ ಮಾಡತಕ್ಕ ಕಾಲದಲ್ಲಿ ೧೦–೨೦ ಗುಂಟೆ ಭೂಮಿಯನ್ನು ಆಕ್ವೈರ್ ಮಾಡಿದರೆ ಭೂಮಾಲೀಕರಿಗೆ ಒಂದು ಸಾವಿರ ರೂಪಾಯಿ ಕೊಡುವುದು ಇದ್ದರೆ ಪತ್ರಿಕೆಗಳಲ್ಲಿ ಪ್ರಕಟಣೆ ಮಾಡುವುದಕ್ಕೆ ೪–೫ ಸಾವಿರ ರೂಪಾಯಿ ಖರ್ಚು ಬರುತ್ತದೆ. ನನ್ನ ಕ್ಷೇತ್ರದಲ್ಲಿ ಇಂಥ ಪ್ರಕರಣ ನಡೆದಿದೆ. ಹಿಂದೆ ಗೆಜೆಟ್‌ನಲ್ಲಿ ನೋಟಿಫಿಕೇಷನ್ ಮಾಡಿ ಆಕ್ವೈರ್ ಮಾಡತಕ್ಕದ್ದು ಇತ್ತು. ರೂಲ್ಸ್ ಬದಲಾವಣೆ ಮಾಡಿ ಲೋಪದೋಷಗಳನ್ನು ಸರಿಪಡಿಸದಿದ್ದರೆ ಆಕ್ವಿಷಿಷನ್ ಚಾರ್ಜಿಗಿಂತ ನೋಟಿಫಿಕೇಷನ್ ಚಾರ್ಜ್ ಜಾಸ್ತಿಯಾಗಿ, ಪಂಚಾಯತಿ ಹಣ ತುಂಬಲು ಸಾಧ್ಯವಿಲ್ಲದೆ ಆಕ್ವೈರ್ ಮಾಡುವುದು ವಿಳಂಬವಾಗುತ್ತದೆ. ಆಕ್ವೈರ್ ಮಾಡಿ ೩೦–೪೦ ವರ್ಷವಾದರೂ ಸೈಟು ಹಂಚುವುದಕ್ಕೆ ಸಾಧ್ಯವಾಗಿಲ್ಲ. ಬಡವರಿಗೆ ನಿವೇಶನ ಕೊಡತಕ್ಕ ಸಂದರ್ಭದಲ್ಲಿ ಹೆಚ್ಚಿನ ವಿಳಂಬ ಆಗದೆ ಕಡಿಮೆ ಪೆಚ್ಚಿದಲ್ಲಿ ಕಾರ್ಯ ಆಗಬೇಕಾಗಿರುವುದರಿಂದ ರೂಲ್ಸ್ ಬದಲಾವಣೆ ಮಾಡಿ ಇರತಕ್ಕ ತೊಂದರೆಯನ್ನು ಸರ್ಕಾರ ಹೋಗಲಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನೇ ಹೇಳಿದ್ದೇನೆ. ಅವರೂ ಒಪ್ಪಿಕೊಂಡಿದ್ದಾರೆ. This is a Central Act. We have requested the Central Government to relax the existing provisions under Sections 5(1) and 6(1) of the Land Reforms Act.

ಅಧ್ಯಕ್ಷರು.—ಶ್ರೀ ಬಿ.ಎಸ್. ಯಡಿಯೂರಪ್ಪ.—ಸದಸ್ಯರು ಹಾಜರಿಲ್ಲ.